# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 623 (783)

ಸದಸ್ಯರ ಹೆಸರು : ಶ್ರೀ ನಿರಾಣಿ ಹಣಮಂತ ರುದ್ರಪ್ಪ (ಪದವೀಧರರ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 18/08/2025

ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಳಗಾವಿ ಜಿಲ್ಲೆಯಲ್ಲಿರುವ ಒಟ್ಟು ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು) | ಬೆಳಗಾವಿ ಶೈಕ್ಷಣಿಕ ಜಿಲ್ಲೆಯಲ್ಲಿರುವ (ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆ ಹೊರತುಪಡಿಸಿ) ಒಟ್ಟು ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಂಖ್ಯೆ 07 ಇದ್ದು ತಾಲ್ಲೂಕುವಾರು ವಿವರಗಳು:-<br>(1) ಬೆಳಗಾವಿ ನಗರ ವಲಯ<br>(2) ಬೆಳಗಾವಿ ಗ್ರಾಮೀಣ ವಲಯ<br>(3) ರಾಮದುರ್ಗ<br>(4) ಚನ್ನಮ್ಮನ ಕಿತ್ತೂರು<br>(5) ಬೈಲಹೊಂಗಲ<br>(6) ಖಾನಾಪೂರ<br>(7) ಸವದತ್ತಿ |
| ಆ) | ಕ್ಷೇತ್ರ ಶಿಕ್ಷಣಾಧಿಕಾರಿಗಳು ನಿವೃತ್ತಿ ಅಥವಾ ವರ್ಗಾವಣೆಗೊಂಡಾಗ ಸದರಿ ಹುದ್ದೆಯ ಪ್ರಭಾರವನ್ನು ಯಾರಿಗೆ ನೀಡಲಾಗುವುದು ಹಾಗೂ ಇದಕ್ಕೆ ಇರುವ ನಿಯಮಾವಳಿಗಳೇನು: (ವಿವರ ನೀಡುವುದು) | ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಸಿ। (1) ನಿಯಮ-68 ಪ್ರಭಾರ 76/2017-18 ದಿನಾಂಕ: 06-02-2018 ಹಾಗೂ ಸಿ1(1) ಪ್ರಭಾರ ಇತರೆ 13/2002-03 (ಭಾಗ-2) ದಿನಾಂಕ:27-12-2002 ರ ಕಂಡಿಕೆ 4 (ಅ) ಮತ್ತು (ಆ)ದಲ್ಲಿ ನಿರ್ದಿಷ್ಟಪಡಿಸಿದಂತೆ, ಕೆ.ಸಿ.ಎಸ್.ಆರ್ ನಿಯಮ-68ರ ಅಡಿಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಹುದ್ದೆಗೆ ಹೆಚ್ಚುವರಿ ಪ್ರಭಾರ ವ್ಯವಸ್ಥೆ ಮಾಡಲು ಈ ಕೆಳಕಂಡಂತೆ ಕಾರ್ಯವಿಧಾನ ಅನುಸರಿಸಲಾಗುತ್ತದೆ.<br><br>1. 4(ಅ) ಕ್ಷೇತ್ರ ಶಿಕ್ಷಣಾಧಿಕಾರಿ ಹುದ್ದೆ ತೆರವಾಗಿದ್ದು, ತಾತ್ಕಾಲಿಕ ಪ್ರಭಾರ ವ್ಯವಸ್ಥೆ ಸಂದರ್ಭದಲ್ಲಿ ಜಿಲ್ಲಾ ಕೇಂದ್ರದ ಕ್ಷೇತ್ರ ಶಿಕ್ಷಣಾಧಿಕಾರಿ ಹುದ್ದೆಗೆ ಮಾತ್ರ |

| | | |
|---|---|---|
| | | ಸ್ಥಳೀಯವಾಗಿ ಡಯಟ್ ಇದ್ದಲ್ಲಿ ಅಲ್ಲಿನ ಹಿರಿಯ ಉಪನ್ಯಾಸಕರ ಪೈಕಿ ಸೇವಾ ಜೇಷ್ಠತೆಯಲ್ಲಿ ಹಿರಿತನ ಹೊಂದಿದ ಅಧಿಕಾರಿಗೆ ಹೆಚ್ಚುವರಿ ಪ್ರಭಾರವನ್ನು ವಹಿಸಿಕೊಡುವುದು.<br><br>2. (ಆ) ಜಿಲ್ಲಾ ಕೇಂದ್ರವಲ್ಲದ ಇತರೆ ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿ ಹುದ್ದೆ ಖಾಲಿಯಾದಾಗ ಅಥವಾ ಜಿಲ್ಲಾ ಕೇಂದ್ರದಲ್ಲಿ ಡಯಟ್ ಇಲ್ಲದ ಸಂದರ್ಭಗಳಲ್ಲಿ ಸ್ಥಳೀಯ ಬಿ.ಆರ್.ಸಿ ಕೋ–ಆರ್ಡಿನೇಟರ್, ಕೇಂದ್ರ ಸ್ಥಾನದಲ್ಲಿರುವ ಸರ್ಕಾರಿ ಪ್ರೌಢ ಶಾಲೆಯ ಮುಖ್ಯ ಶಿಕ್ಷಕರು ಈ ಪೈಕಿ ಸೇವಾ ಜೇಷ್ಠತೆಯಲ್ಲಿ ಹಿರಿತನ ಹೊಂದಿದ ಅಧಿಕಾರಿಗೆ ಹೆಚ್ಚುವರಿ ಪ್ರಭಾರವನ್ನು ವಹಿಸಿಕೊಡುವುದು. ಇಂತಹ ವ್ಯವಸ್ಥೆಗೆ ಜಿಲ್ಲಾ ಉಪನಿರ್ದೇಶಕರು(ಆಡಳಿತ) ರವರ ಅನುಮೋದನೆ ಪಡೆಯುವುದು. |
| ಇ) | ನಿಯಮಗಳಿಗೆ ವ್ಯತಿರಿಕ್ತವಾಗಿ ಬೆಳಗಾವಿ ಜಿಲ್ಲೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಹುದ್ದೆಗೆ ಅಂತಹ ಜಿಲ್ಲಾ ನಿಯೋಜನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಯಾವ ಕಾರಣಕ್ಕಾಗಿ ನೇಮಕ ಮಾಡಲಾಗಿದೆ? (ವಿವರ ನೀಡುವುದು) | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಳಗಾವಿ ಇವರ ಜ್ಞಾಪನ ಪತ್ರ ಸಂಖ್ಯೆ: ಜಿಪಂಬೆ/ಅಭಿವೃದ್ಧಿ/ಶಿಕ್ಷಣ/ವಿವ–36/ 2024–25, ದಿನಾಂಕ:06.07.2024 ರನ್ವಯ ಶ್ರೀ ಸಿ. ವೈ. ತುಬಾಕದ ಕಿರಿಯ ಸಂಶೋಧನಾಧಿಕಾರಿ, ಅಪರ ಆಯುಕ್ತರ ಕಚೇರಿ, ಶಾಲಾ ಶಿಕ್ಷಣ ಇಲಾಖೆ, ಧಾರವಾಡ, (ನಿಯೋಜನೆ ಮೇರೆಗೆ ಮುಖ್ಯ ಶಿಕ್ಷಕರು, ಸರ್ಕಾರಿ ಉರ್ದು ಪ್ರೌಢ ಶಾಲೆ, ಬೈಲಹೊಂಗಲ) ಇವರನ್ನು ಬೆಳಗಾವಿ ಜಿಲ್ಲೆಯ ಚನ್ನಮ್ಮನ ಕಿತ್ತೂರು ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಖಾಲಿ ಹುದ್ದೆಗೆ ಹೆಚ್ಚುವರಿ ಪ್ರಭಾರದಲ್ಲಿ ಕಾರ್ಯನಿರ್ವಹಿಸಲು ಆದೇಶಿಸಲಾಗಿತ್ತು.<br><br>ಸದರಿ ಅಧಿಕಾರಿಯವರನ್ನು ಕ್ಷೇತ್ರ ಶಿಕ್ಷಣಾಧಿಕಾರಿ, ಕಿತ್ತೂರು ಮತ್ತು ಮುಖ್ಯ ಶಿಕ್ಷಕರು, ಸರ್ಕಾರಿ ಉರ್ದು ಪ್ರೌಢ ಶಾಲೆ, ಬೈಲಹೊಂಗಲ ಈ ಎರಡೂ ಹುದ್ದೆಗಳಿಗೆ ಪ್ರಭಾರದಲ್ಲಿರಿಸಿದ್ದು, ಕ್ಷೇತ್ರ ಶಿಕ್ಷಣಾಧಿಕಾರಿ, ಚನ್ನಮ್ಮನ ಕಿತ್ತೂರು ಹುದ್ದೆಯು ಹೆಚ್ಚುವರಿ ಪ್ರಭಾರದಲ್ಲಿಸಿರಿದ ಹುದ್ದೆಯಾಗಿರುತ್ತದೆ. ಈ ಹಿನ್ನಲೆಯಲ್ಲಿ ಹೆಚ್ಚುವರಿ ಪ್ರಭಾರವನ್ನು ಹೊರತುಪಡಿಸಿ ಮುಖ್ಯ ಶಿಕ್ಷಕರು, ಸರ್ಕಾರಿ ಉರ್ದು ಪ್ರೌಢ ಶಾಲೆ, ಬೈಲಹೊಂಗಲ ಹುದ್ದೆಯಲ್ಲಿ |

| | | |
|---|---|---|
| | | ಮಾತ್ರ ಮುಂದುವರೆಸುವಂತೆ ಅಪರ ಆಯುಕ್ತರು, ಶಾ.ಶಿ. ಇಲಾಖೆ, ಧಾರವಾಡ ಇವರಿಂದ ಪ್ರಸ್ತಾವನೆ ಸ್ವೀಕೃತಿಯಾಗಿತ್ತು.<br><br>ಪ್ರಸ್ತಾವನೆಯನ್ನು ಸರ್ಕಾರದ ಹಂತದಲ್ಲಿ ಪರಿಶೀಲಿಸಿ, ಸರ್ಕಾರದ ಪತ್ರ ಸಂಖ್ಯೆ: ಇಪಿ 279 ಎಸ್ಎಲ್‌ಬಿ 2025, ದಿನಾಂಕ:02.08.2025ರಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ, ಚನ್ನಮ್ಮನ ಕಿತ್ತೂರು ಹುದ್ದೆಯ ಹೆಚ್ಚುವರಿ ಪ್ರಭಾರದಿಂದ ಇವರನ್ನು ಬಿಡುಗಡೆಗೊಳಿಸಿ, ಮುಖ್ಯ ಶಿಕ್ಷಕರು, ಸರ್ಕಾರಿ ಉರ್ದು ಪ್ರೌಢ ಶಾಲೆ, ಬೈಲಹೊಂಗಲ ಹುದ್ದೆಯಲ್ಲಿ ಮಾತ್ರ ಮುಂದುವರೆಸುವ ಬಗ್ಗೆ ಸೂಕ್ತ ಕ್ರಮವಹಿಸುವಂತೆ ಅಪರ ಆಯುಕ್ತರು, ಶಾ.ಶಿ. ಇಲಾಖೆ, ಧಾರವಾಡ ಇವರಿಗೆ ತಿಳಿಸಲಾಗಿದೆ. |

ಸಂಖ್ಯೆ: ಇಪಿ 35 ಪಿಡಿಬಿ 2025

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು
ಹಾಗೂ ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವರು